# ಅಂಕೆ ತಪ್ಪಿದ ತಿವಾರಿ

ಅಂಕಿತ್ ತಿವಾರಿ ಸದ್ಯಕ್ಕೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾನೆ. 2014ರ ಮಾರ್ಚ್‌ನಲ್ಲಿ ಈತನ ವಿರುದ್ಧ ದಾಖಲಾದ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಮುಂಬೈಯ ಸೆಶನ್ಸ್ ಕೋರ್ಟ್ ಈತನ ಪರವಾದ ತೀರ್ಪಿತ್ತಿದೆ. 'ಆರೋಪ ಹೊರಿಸಿದ ಹೆಣ್ಣುಮಗಳೇ ನ್ಯಾಯಾಲಯದಲ್ಲಿ ಉಲ್ಟಾ ಸಾಕ್ಷಿ ಹೇಳಿದ್ದರಿಂದ ಮತ್ತು ಅತ್ಯಾಚಾರವನ್ನು ಸಾಬೀತು ಮಾಡಲು ಸೂಕ್ತ ಸಾಕ್ಷ್ಯಗಳನ್ನು ಒದಗಿಸಲು ಪ್ರಾಸಿಕ್ಯೂಶನ್ ವಿಫಲವಾಗಿರುವುದರಿಂದ' ಅಂಕಿತ್ ತಿವಾರಿಯನ್ನು ಬಿಡುಗಡೆಗೊಳಿಸಲಾಗಿದೆ. ನ್ಯಾಯಾಲಯದ ತೀರ್ಪನ್ನು ಅಕ್ಷರ ಅಕ್ಷರವನ್ನೂ ಓದಿದರೆ, ಅಂಕಿತ್ ತಿವಾರಿ ತಪ್ಪೇ ಮಾಡಿಲ್ಲ ಎಂದು ಯಾರಿಗೂ ಅನ್ನಿಸುವುದಿಲ್ಲ! ಆದರೆ ಸೂಕ್ತ ಸಾಕ್ಷ್ಯಗಳನ್ನು ಒದಗಿಸಲಾಗಿಲ್ಲ ಎನ್ನುವುದಷ್ಟೇ ಇಲ್ಲಿ ಮುಖ್ಯ.

ಬಾಲಿವುಡ್‌ನಲ್ಲಿ 2010ರ ಬಳಿಕ ಯಶಸ್ಸಿನ ಕುದುರೆಯೇರಿದ ಗಾಯಕ ಅಂಕಿತ್ ತಿವಾರಿ. ಹಿನ್ನೆಲೆ ಗಾಯನದ ಜತೆಗೆ ಮ್ಯೂಸಿಕ್ ಕಂಪೋಸಿಂಗ್ ಮತ್ತು ಸಂಗೀತ ನಿರ್ದೇಶನದಲ್ಲೂ ಅತ್ಯುತ್ತಮ ಸಾಧನೆ ಮಾಡಿದ್ದರಿಂದ ಸಹಜವಾಗಿಯೇ ಖ್ಯಾತಿ ಬಂತು. ಖ್ಯಾತಿಯ ಜತೆಗೆ ಗೆಳೆಯರೂ, ಗೆಳತಿಯರೂ ಬರುವುದು ಬಾಲಿವುಡ್‌ನ ಸಹಜ ನಿಯಮ. ತನ್ನ ಜತೆಗೇ ಹಾಡುತ್ತಿದ್ದ ಗಾಯಕಿಯೊಬ್ಬಳನ್ನು ಅಂಕಿತ್ ತಿವಾರಿ ತುಂಬಾ ಹಚ್ಚಿಕೊಂಡದ್ದು ಬಾಲಿವುಡ್‌ನಲ್ಲಿ ಬಹುತೇಕರಿಗೆ ಗೊತ್ತಿದ್ದ ಸಂಗತಿ. ಇಬ್ಬರ ಗೆಳೆತನ ನಿಕಟವಾದಷ್ಟೂ ತಿರುಗಾಟ ಹೆಚ್ಚಾಯಿತು. ಹುಡುಗಿ ತನ್ನನ್ನು ಮದುವೆಯಾಗು ಎಂದಳು. ಈತನೂ ಹೂಂ ಎಂದ. ಆದರೆ ಮದುವೆಗೆಂದು ರಿಜಿಸ್ಟ್ರಾರ್ ಕಚೇರಿಗೆ ಕರೆದಾಗ ಅಂಕಿತ್ ಹೋಗಲಿಲ್ಲ. ಜಗಳವಾಯಿತು. ಹುಡುಗಿ ಅತ್ಯಾಚಾರದ ಕೇಸ್ ಹಾಕಿದಳು. ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಮಾಡುವುದು ಘೋರ ಅಪರಾಧವೇ. ಅಂಕಿತ್‌ನ ಸೋದರ ಅಂಕುರ್ ದೈಹಿಕ ಹಲ್ಲೆ ನಡೆಸುವುದಾಗಿ ಬೆದರಿಕೆ ಹಾಕಿದ್ದೂ ದಾಖಲಾಯಿತು. ಈಗ ಮೂರು ವರ್ಷಗಳ ಸುದೀರ್ಘ ವಿಚಾರಣೆಯ ಬಳಿಕ ಅಂಕಿತ್ ಮತ್ತು ಅಂಕುರ್ ಇಬ್ಬರಿಗೂ ಕೋರ್ಟಿನ ಕ್ಲೀನ್‌ಚಿಟ್ ಸಿಕ್ಕಿದೆ.

ಆದರೆ ಪ್ರಕರಣ ಇಲ್ಲಿಗೇ ಮುಗಿಯುವಂತೆ ಕಾಣುತ್ತಿಲ್ಲ. ಬಿಡುಗಡೆಯಾದ ಬಳಿಕ ಅಂಕಿತ್ ನೀಡಿರುವ ಹೇಳಿಕೆಯಿಂದ ಆ ಹುಡುಗಿ ನಿರಾಶೆಗೊಂಡಿದ್ದಾಳೆ. 'ತಪ್ಪನ್ನು ಒಪ್ಪಿಕೊಂಡು ಅಂಕಿತ್ ವೈಯಕ್ತಿಕವಾಗಿ ಕ್ಷಮೆ ಕೇಳಿದ್ದ. ಇನ್ನು ಮುಂದೆ ಈ ಪ್ರಕರಣಕ್ಕೆ ಸಂಬಂಧಿಸಿ ಯಾವ ಹೇಳಿಕೆಯನ್ನೂ ನೀಡುವುದಿಲ್ಲ ಎಂದಿದ್ದ. ಆತನ ವಕೀಲರು, ಮನೆಯವರೆಲ್ಲ ನನ್ನ ಮೇಲೆ ಒತ್ತಡ ಹಾಕಿದ್ದರು. ಹಾಗಾಗಿ ಕೋರ್ಟ್‌ನಲ್ಲಿ ನಾನು ಉಲ್ಟಾಸಾಕ್ಷಿ ಆಗಿದ್ದೆ. ಈಗ ನೋಡಿದರೆ ಎಲ್ಲರೂ ಸಂಭಾವಿತರಂತೆ ಏನೂ ನಡೆದಿಲ್ಲ ಎನ್ನುತ್ತಿದ್ದಾರೆ. ನನ್ನ ಚಾರಿತ್ರ್ಯವಧೆ ಮಾಡುತ್ತಿದ್ದಾರೆ. ಹಾಗಾಗಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ ಕೇಸ್ ಮತ್ತೆ ಆರಂಭಿಸುವಂತೆ ಕೋರುತ್ತೇನೆ' ಎಂದು ಆ ಹುಡುಗಿ ಹೇಳಿಕೆ ನೀಡಿದ್ದಾಳೆ.

ಖ್ಯಾತಿಯ ಜತೆಗೇ ಅಪಖ್ಯಾತಿಯೂ ಬೆನ್ನು ಹತ್ತಿದರೆ ಏನಾಗುತ್ತದೆ ಅಂಕಿತ್ ದೊಡ್ಡ ಉದಾಹರಣೆ. ಹಿನ್ನೆಲೆ ಗಾಯಕ ಮತ್ತು ಸಂಗೀತ ನಿರ್ದೇಶಕನಾಗಿ ಅಂಕಿತ್ ಒಮ್ಮೆಲೆ ಏರಿದ ಎತ್ತರ ಅಸಾಧಾರಣ. ಆದರೆ ಅಷ್ಟೇ ವೇಗದಲ್ಲಿ ಖ್ಯಾತಿಯ ಶಿಖರದಿಂದ ಕೆಳಕ್ಕುರುಳಿದ್ದೂ ಆಯಿತು. ನಾಲ್ಕು ವರ್ಷಗಳ ಹಿಂದೆ 'ಆಶಿಖಿ 2' ಚಿತ್ರಕ್ಕೆ 'ಸುನ್ ರಹಾ ಹೈ' ಎಂದು ಹಾಡಿದ ಅಂಕಿತ್ ರಾತ್ರಿ ಬೆಳಗಾಗುವುದರೊಳಗೆ ಖ್ಯಾತಿ ಹೊಂದಿದ. ಆ ಚಿತ್ರಕ್ಕೆ ಸಂಗೀತ ನಿರ್ದೇಶನವನ್ನೂ ನೀಡಿದ್ದರಿಂದ ಮೊತ್ತ ಮೊದಲ ಫಿಲಂಫೇರ್ ಪ್ರಶಸ್ತಿಯೂ ದೊರಕಿತು. ಒಂದರ ಹಿಂದೆ ಒಂದರಂತೆ ಅವಕಾಶಗಳ ಬಾಗಿಲುಗಳು ತೆರೆದವು. ಪ್ರತಿಭಾವಂತ ಅಂಕಿತ್ ಅವುಗಳನ್ನು ಸರಿಯಾಗಿಯೇ ಬಳಸಿಕೊಂಡ. ಆದರೆ ಅತ್ಯಾಚಾರದ ಆರೋಪದಿಂದ ಬಂಧನಕ್ಕೊಳಗಾದ ಬಳಿಕ ಅವಕಾಶಗಳು ಕೈಕೊಟ್ಟವು. ಬಾಲಿವುಡ್‌ನ ಬಹುತೇಕ ನಿರ್ಮಾಪಕರು ಅಂಕಿತ್‌ನನ್ನು ದೂರವಿಟ್ಟರು. ಖ್ಯಾತಿಯ ಉತ್ತುಂಗಕ್ಕೆ ಏರಿ ಕೆಳಗೆ ನೋಡಿ ಖುಷಿ ಪಡಬೇಕು ಅನ್ನುವಷ್ಟರಲ್ಲೇ ಅಂಕಿತ್ ಕೆಳಗೆ ಜಾರಿದ್ದ.

ಅಂಕಿತ್ ಪ್ರತಿಭಾವಂತ ಎನ್ನುವುದರಲ್ಲಿ ಎರಡು ಮಾತಿಲ್ಲ. ಹುಟ್ಟಿದ್ದು ಕಾನ್ಪುರದಲ್ಲಿ. ಆತನ ಪೋಷಕರು ಅಲ್ಲಿ ರಾಜು ಸುಮನ್ ಅಂಡ್ ಪಾರ್ಟಿ ಎನ್ನುವ ಧಾರ್ಮಿಕ ಸಂಗೀತದ ತಂಡ ನಡೆಸುತ್ತಿದ್ದರು. ಈತನ ತಾಯಿ ಭಕ್ತಿಗೀತೆ ಹಾಡುತ್ತಿದ್ದರು. ಮಗ ಓದಿ ಮುಂದೆ ಬರಲಿ ಎಂದು ತಂದೆ ತಾಯಿ ಹಾರೈಸಿದರೂ, ಆತನ ಸಂಗೀತದ ಒಲವನ್ನು ನಿರಾಕರಿಸಲಾಗದೆ ತರಬೇತಿಗೆ ಹಚ್ಚಿದರು. ವಿನೋದ್ ಕುಮಾರ್ ದ್ವಿವೇದಿ ಶಾಸ್ತ್ರೀಯ ಸಂಗೀತ ಕಲಿಸಿದರು. ಜತೆಗೆ ಪಿಯಾನೋ, ದ್ರುಪದ್ ಮತ್ತು ಪಾಶ್ಚಾತ್ಯ ಲಘು ಸಂಗೀತದ ತರಬೇತಿ. ಹಲವು ಬಹುಮಾನಗಳನ್ನು ಪಡೆದ ಹುಡುಗ ಗ್ವಾಲಿಯರ್‌ನಲ್ಲಿ ರೇಡಿಯೊ ಸ್ಟೇಶನ್ ಒಂದರ ಮುಖ್ಯಸ್ಥನಾದ. 2007ರಲ್ಲಿ ಮುಂಬೈಗೆ ವಲಸೆ ಬಂದ. ಮುಂಬೈಯಲ್ಲಿ ನಿರ್ದೇಶಕ ಪ್ರದೀಪ್ ಸರ್ಕಾರ್ ಬೆಂಬಲ ಸಿಕ್ಕಿದ್ದು ಅವಕಾಶಗಳ ಬಾಗಿಲು ತೆರೆಯಿತು. 'ದೋ ದೂನಿ ಚಾರ್' ಎನ್ನುವ ಮೊದಲ ಚಿತ್ರದ ಮ್ಯೂಸಿಕ್ ಕಂಪೋಸಿಂಗ್ ವಿಮರ್ಶಕರ ಗಮನ ಸೆಳೆಯಿತು. ಬಳಿಕ ಯಶಸ್ವಿ ಚಿತ್ರ 'ಸಾಹೆಬ್ ಬೀವಿ ಔರ್ ಗ್ಯಾಂಗ್‌ಸ್ಟರ್'ನ ಥೀಮ್ ಸಾಂಗ್ ಜನಪ್ರಿಯವಾಯಿತು. ಆ ಚಿತ್ರದಲ್ಲಿ ಹಿನ್ನೆಲೆ ಗಾಯನಕ್ಕೂ ಇಳಿದ ಅಂಕಿತ್ ಬಾಲಿವುಡ್ ಕಿವಿಯರಳಿಸುವಂತೆ ಹಾಡಿದ.

ಇಸ್ಮಾಯಿಲ್ ದರ್ಬಾರ್, ಹಿಮೇಶ್ ರೇಶಮಿಯಾ ಮುಂತಾದ ಖ್ಯಾತ ಸಂಗೀತ ನಿರ್ದೇಶಕರ ಚಿತ್ರಗಳಲ್ಲಿ ಸಿಕ್ಕಿದ ಅವಕಾಶಗಳು ಅಂಕಿತ್‌ನ ಖ್ಯಾತಿಯನ್ನು ಇನ್ನಷ್ಟು ಎತ್ತರಕ್ಕೆ ಏರಿಸಿದವು. ಹಲವು ಏಳು– ಬೀಳುಗಳ ನಡುವೆಯೂ 'ಏಕ್ ವಿಲ್ಲನ್' ಚಿತ್ರದ 'ಗಾಲಿಯಾಂ..' ಎಂಬ ಹಾಡು, ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿತು. ಪ್ರೇಮಗೀತೆಗಳು ಮತ್ತು ವಿರಹಗೀತೆಗಳನ್ನು ಹಾಡುವುದರ ಮೂಲಕ ಈತ ಅಭಿಮಾನಿಗಳ ಮನಸ್ಸು ಹೊಕ್ಕವನು. ಕೆಕೆ, ಪ್ಯೂರ್ಟೋ ರಿಕನ್ ಮತ್ತು ಕಿರಿ ಮಾರ್ಟಿನ್‌ರನ್ನು ಮೆಚ್ಚಿಕೊಳ್ಳುವ ಅಂಕಿತ್, ನುಸ್ರತ್ ಫತೇ ಅಲಿ ಖಾನ್‌ರ ಪಕ್ಕಾ ಅಭಿಮಾನಿ. ಈಗ ಕೋರ್ಟ್ ತೀರ್ಪಿನ ಬಳಿಕ ಮತ್ತಷ್ಟು ಅವಕಾಶಗಳು ಅರಸಿ ಬಂದಿವೆಯಾದರೂ, ಮತ್ತೆ ಕೇಸ್ ಓಪನ್ ಆದರೆ ಕೆಟ್ಟಕಾಲ ತಪ್ಪಿದ್ದಲ್ಲ. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65